ಪಿಡಬ್ಲ್ಯು-1

ಎಂ ವಿ ಸಿ 580, 581 ಮತ್ತು 563/2020

ದಿನಾಂಕಃ 07-12-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎನ್ ಎಸ್ 2ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವು 3 ವರ್ಷಗಳ ಹಿಂದೆ ಬಿಷ್ಣಹಳ್ಳಿ ಬಳಿ ಸಂಭವಿಸಿರುತ್ತದೆ. ನಾನು ಅಟೋದಲ್ಲಿ ಹೋಗುತ್ತಿರುವಾಗ ಅಪಘಾತವಾಗಿರುತ್ತದೆ. ಅಪಘಾತವು ಲಾರಿ ಮತ್ತು ಆಟೋದ ನಡುವೆ ಸಂಭವಿಸಿರುತ್ತದೆ ಅಂದರೆ ಸರಿ. ಆಟೋ ಬಸಣ್ಣ ಅನ್ನುವವರಿಗೆ ಸೇರಿರುತ್ತದೆ. ಅಪಘಾತದ ಬಗ್ಗೆ ಅದೇ ದಿನ ನಾನು ದೂರು ನೀಡಿರುತ್ತೇನೆ. ಆಟೋದಲ್ಲಿ ಸುಮಾರು 10 ರಿಂದ 11 ಜನ ಸಂಚರಿಸುತ್ತಿದ್ದೆವು ಅಂದರೆ ಸರಿ. ಆಟೋದ ಚಾಲಕ ಬಸಣ್ಣ. ಅಪಘಾತಕ್ಕೆ ಆಟೋದ ಚಾಲಕ ಸಹ ಕಾರಣ ಅಂದರೆ ಸರಿಯಲ್ಲ. ಅವರಿಗೆ ಸರಿಯಾದ ಚಾಲನಾ ಪರವಾನಿಗೆ ಇರಲಿಲ್ಲ ಅಂದರೆ ಸರಿಯಲ್ಲ. ಸದರಿ ಆಟೋ ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಮಾತ್ರ ಸಂಚರಿಸಬೇಕಾಗುತ್ತದೆ ಅಂದರೆ ಗೊತ್ತಿಲ್ಲ ಆಟೋದಲ್ಲಿ ಕೇವಲ 4 ಜನ ಮಾತ್ರ ಸಂಚರಿಸಬೇಕಾಗುತ್ತದೆ ಅಂದರೆ ಗೊತ್ತಿಲ್ಲ .

2. 1ನೇ ಎದುರುದಾರರಿಗೆ ಚಾಲನಾ ಪರವಾನಿಗೆ ಇರುವುದಿಲ್ಲ ಅಂದರೆ ಗೊತ್ತಿರುವುದಿಲ್ಲ . ಸದರಿ ಲಾರಿಗೆ ಆರ್ ಸಿ ಮತ್ತು ಎಫ್ ಸಿ ಇರುವುದಿಲ್ಲ ಅಂದರೆ ಗೊತ್ತಿಲ್ಲ. ಆಟೋದಲ್ಲಿ ಹೆಚ್ಚಿನ ಪ್ರಯಾಣಿಕರು ಇದ್ದುದ್ದರಿಂದ ಆಟೋದ ಚಾಲಕನಿಗೆ ಚಾಲನೆ ಮಾಡಲು ಹತೋಟಿ ತಪ್ಪಿ ಅಪಘಾತವಾಗಿರುತ್ತದೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಕೈ , ಸೊಂಟ ಮತ್ತು ಲಿವರಗೆ ಪೆಟ್ಟಾಗಿರುತ್ತದೆ. ನಾನು ಖಾಸನಹೊಸಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿ 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿಂದ ಎನೆಪೋಯ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಒಟ್ಟು 50 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ತೀವ್ರ ಸ್ವರೂಪದ ಗಾಯಗಳಾಗಿರುವುದಿಲ್ಲ ಆದರೆ ಕೇವಲ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ

ಪಿಡಬ್ಲ್ಯೂ-1
ಎಂ ವಿ ಸಿ 580, 581 ಮತ್ತು 563/2020

ಅಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ಯಾವುದೇ ವೆಚ್ಚ ತಗುಲಿಲ್ಲ ಆದ್ದರಿಂದ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿಯಲ್ಲ . ನಾನು ಬಿಲ್ಲುಗಳನ್ನು ಸೃಷ್ಟಿಸಿ ಹಾಜರ ಪಡಿಸಿದ್ದೇನೆ ಅಂದರೆ ಸರಿಯಲ್ಲ.

3. ನನ್ನ ವೃತ್ತಿಯ ಬಗ್ಗೆ ಮತ್ತು ಆದಾಯದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ 60 ವರ್ಷಕ್ಕಿಂತ ಜಾಸ್ತಿ ವಯಸ್ಸು ಆಗಿದೆ ಅಂದರೆ ಸರಿಯಲ್ಲ, ನನಗೆ 51 ವರ್ಷ ಆಗಿದೆ . ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಅಂದರೆ ಸರಿಯಲ್ಲ. ನಾನು ಮೊದಲಿನಂತೆಯೇ ಈಗಲೂ ಕೆಲಸ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.